**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊ.ಸಂ.ಕು/ಹೆ.ವಿ.ಕು/2021-22 ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ,
ಬೆಂಗಳೂರು-560012.
ದಿನಾಂಕ:19-07-2021.

**-: ಸುತ್ತೋಲೆ :-**

ವಿಷಯ:- 2021-22ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿನ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ / ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಆಸಕ್ತಿ ಹೊಂದಿರುವ ಕಾಲೇಜಿನ ಆಡಳಿತ ಮಂಡಳಿ / ಪ್ರಾಂಶುಪಾಲರಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ:- 1. ಕರ್ನಾಟಕ ಪದವಿ ಪೂರ್ವ ಶಿಕ್ಷಣ(ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು 2006.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 90 ಎಸ್‌ಹೆಚ್‌ಹೆಚ್ 2019 ದಿನಾಂಕ 18-11-2019.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 195 ಡಿಜಿಡಿ 2017 ದಿನಾಂಕ 20-03-2018.

***

2021-22ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿನ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ / ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಆಸಕ್ತಿ ಹೊಂದಿರುವ ಕಾಲೇಜಿನ ಆಡಳಿತ ಮಂಡಳಿ / ಪ್ರಾಂಶುಪಾಲರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ರಾಜ್ಯದಲ್ಲಿ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳು ಸರ್ಕಾರದಿಂದ ಮಂಜೂರಾತಿ ಆದೇಶ ಪಡೆದು ನಿರ್ದೇಶನಾಲಯ / ಇಲಾಖೆಯಿಂದ ಶೈಕ್ಷಣಿಕ ಮಾನ್ಯತೆಯನ್ನು ಪಡೆದು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆ ನಡೆಸುತ್ತಿರುವ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಹೊಂದಿ, ವಿದ್ಯಾರ್ಥಿಗಳ ಪ್ರವೇಶಾತಿಯ ಬೇಡಿಕೆಗೆ ಅನುಗುಣವಾಗಿ ಹೊಸ ಭಾಷೆ, ಹೊಸ ಸಂಯೋಜನೆ, ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999 ಬೆಂಗಳೂರು ದಿನಾಂಕ: 09-10-2006ರ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ, ಸಹಾಯಾನುದಾನ ಮತ್ತು ಇತರೆ) ನಿಯಮ 2006ರ ನಿಯಮಗಳಲ್ಲಿ ಈ ಕೆಳಕಂಡ ಅವಕಾಶ ಕಲ್ಪಿಸಿದೆ.

1. ಸದರಿ ನಿಯಮಗಳ ನಿಯಮ 11(3) ಈ ಮುಂದಿನಂತಿದೆ- "Every Pre-University College may have upto three sections with three distinct combination of subjects during the first year of its commencement, but there shall be at least two distinct combinations. The minimum and maximum student strength for a section shall be forty and eighty respectively"..... 

...2

2. ಸದರಿ ನಿಯಮಗಳ ನಿಯಮ 11(4) ಈ ಮುಂದಿನಂತಿದೆ– "A minimum of ten students shall be necessary in each of the languages taught in part-I. If the student strength in any of the approved languages or optional subjects get reduced below the prescribed students strength successively for three years then the college shall not admit students to the said language or optional subject in the academic year. Any admission made in violation of these rules shall be void, ab- initio and the students shall not be eligible to appear annual examination."

3. ಹೊಸ ಭಾಷೆ / ಸಂಯೋಜನೆ ಮತ್ತು ಹೆಚ್ಚುವರಿ ವಿಭಾಗಗಳ ಕುರಿತಂತೆ ಉಲ್ಲೇಖ 03ರ ಸರ್ಕಾರದ ಆದೇಶ ಸಂಖ್ಯೆ: ಇಡಿ 195 ಡಿಜಿಡಿ 2017 ದಿನಾಂಕ:20–03–2018 ರಲ್ಲಿ ಪಾವತಿಸಬೇಕಾದ ಶುಲ್ಕವನ್ನು ನಿರ್ದಿಷ್ಟಪಡಿಸಿದೆ. ಇದರನ್ವಯ ಹೊಸ ಭಾಷೆ / ಸಂಯೋಜನೆ ಮತ್ತು ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಆಸಕ್ತಿ ಹೊಂದಿರುವ ಆಡಳಿತ ಮಂಡಳಿಯು ನಿಗದಿತ ಶುಲ್ಕ ಪಾವತಿಸಬೇಕಾದ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ವಿಷಯ | ನಿರ್ದಿಷ್ಟಪಡಿಸಿದ ಶುಲ್ಕ |
|---|---|---|
| 01 | ವಿಜ್ಞಾನ ಸಂಯೋಜನೆ | ₹38000/– |
| 02 | ಕಲಾ & ವಾಣಿಜ್ಯ ಸಂಯೋಜನೆ (without practical subject) | ₹20000/– |
| 03 | ವಾಣಿಜ್ಯ ಸಂಯೋಜನೆ (with practical subject) | ₹38000/– |
| 04 | ಒಂದು ಭಾಷೆ ವಿಷಯಕ್ಕೆ | ₹20000/– |

| ಹೊಸದಾಗಿ ಪ್ರಾರಂಭಿಸುವ ಹೆಚ್ಚುವರಿ ವಿಭಾಗಕ್ಕೆ ಪಾವತಿಸಬೇಕಾದ ಶುಲ್ಕ | | |
|---|---|---|
| 01 | ವಿಜ್ಞಾನ ಸಂಯೋಜನೆಗೆ | ₹20000/– |
| 02 | ಕಲಾ ಸಂಯೋಜನೆ | ₹10000/– |
| 03 | ವಾಣಿಜ್ಯ ಸಂಯೋಜನೆ | ₹10000/– |

4. ಉಲ್ಲೇಖ–2ರ ಪತ್ರದಲ್ಲಿ ಸರ್ಕಾರವು ಖಾಸಗಿ ಪದವಿ ಪೂರ್ವ ಕಾಲೇಜುಗಳ ಕಟ್ಟಡದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ National Building code ಅನ್ವಯ ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ / ಅನುಮತಿ ಮಾನ್ಯತೆ ನವೀಕರಣ ಮತ್ತು ಹೆಚ್ಚುವರಿ ವಿಭಾಗ / ವಿಷಯ / ಸಂಯೋಜನೆ ಮಂಜೂರಾತಿ ನೀಡುವ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಾನುಸಾರ ಪರಿಶೀಲಿಸಿ ಹೆಚ್ಚುವರಿ ವಿಭಾಗ / ಭಾಷೆ / ಸಂಯೋಜನೆಗಳ ಪ್ರಸ್ತಾವನೆಗೆ ಅನುಮತಿ ನೀಡಲು ನಿರ್ದೇಶಿಸಿದೆ.

5. 2021–22ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ / ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸುವ ಕುರಿತಂತೆ ಸಂಬಂಧಿಸಿದ ಆಡಳಿತ ಮಂಡಳಿ / ಪ್ರಾಂಶುಪಾಲರಿಂದ ಇದರೊಂದಿಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿಯನ್ನು ಪಡೆದು, ವೇಳಾ ಪಟ್ಟಿಯಂತೆ ವಿಳಂಬಕ್ಕೆ ಆಸ್ಪದ ನೀಡದೆ ಉಲ್ಲೇಖ–2ರ ಸರ್ಕಾರದ ನಿರ್ದೇಶನದಂತೆ ಖಾಸಗಿ ಪದವಿ ಪೂರ್ವ ಕಾಲೇಜುಗಳು ಸುರಕ್ಷತಾ ಕ್ರಮ ಕೈಗೊಂಡಿರುವ ಬಗ್ಗೆ ಖಚಿತಪಡಿಸಿಕೊಂಡು **ದಿನಾಂಕ:04–08–2021ರ** ಒಳಗಾಗಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಉಪ ನಿರ್ದೇಶಕರುಗಳಿಗೆ ನಿರ್ದೇಶಿಸಿದೆ. ಉಲ್ಲೇಖ–2ರ ಸರ್ಕಾರದ ನಿರ್ದೇಶದನ್ವಯ ಕ್ರಮ ಕೈಗೊಳ್ಳುವುದು ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿ / ಸಿಬ್ಬಂದಿಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವದು.

ನಿರ್ದೇಶಕರು
**ಪದವಿ ಪೂರ್ವ ಶಿಕ್ಷಣ ಇಲಾಖೆ**

ರವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಈ ಕುರಿತು ಹೆಚ್ಚಿನ ಪ್ರಚಾರ ಕೈಗೊಳ್ಳತಕ್ಕದ್ದು.

ಪ್ರತಿಗಳು ಮಾಹಿತಿಗಾಗಿ :–

1. ಮಾನ್ಯ ನಿರ್ದೇಶಕರ ಆಪ್ತಶಾಖೆ.
2. ಜಂಟಿ ನಿರ್ದೇಶಕರ / ಉಪ ನಿರ್ದೇಶಕರ (ಮಾ&ಅ) ಆಪ್ತಶಾಖೆ.
3. ಮಾನ್ಯತೆ ಶಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ
4. ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊ.ಸಂ.ಕು/ಹೆ.ವಿ.ಕು/2021-22 ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ:19-07-2021

# -: ಪ್ರಕಟಣೆ :-

ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 11 (3) & (4) ರನ್ವಯ ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರವ ಖಾಸಗಿ ಅನುದಾನಿತ / ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ / ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲು ಇಚ್ಛಿಸುವ ಖಾಸಗಿ ಅನುದಾನಿತ / ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳು ಅರ್ಜಿಗಳನ್ನು ಸಂಬಂಧಿಸಿ ಆಯಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ನಿಗಧಿತ "ಅರ್ಜಿ ನಮೂನೆ" **(FORM-6)** ರಲ್ಲಿ **ದಿನಾಂಕ:31-07-2021ರ** ಒಳಗೆ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ. ಈ ಸಂಬಂಧ ಸುತ್ತೋಲೆ ಮತ್ತು ಫಾರಂ-06ನ್ನು ಇಲಾಖಾ ಜಾಲತಾಣ www.pue.kar.nic.in ಇಲ್ಲಿಂದ ಪಡೆಯಬಹುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊ.ಸಂ.ಕು/ಹೆ.ವಿ.ಕು/2021-22ಕ್ಕೆ ಅನುಬಂಧ

## ವೇಳಾಪಟ್ಟಿ

2021-22ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿನ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ / ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಆಸಕ್ತಿ ಹೊಂದಿರುವ ಕಾಲೇಜಿನ ಆಡಳಿತ ಮಂಡಳಿ / ಪ್ರಾಂಶುಪಾಲರಿಂದ ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

| ಕ್ರ.ಸಂ | ಹಲವು ಹಂತಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು | ದಿನಾಂಕ |
|---|---|---|
| 01 | 2021-22ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿನ ಖಾಸಗಿ ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಭಾಷೆ / ಸಂಯೋಜನೆ ಹಾಗೂ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಇಚ್ಛಿಸಿರುವ ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು ನಿರ್ದೇಶಕರ ಕಛೇರಿ ಹಂತದಲ್ಲಿ, ಜಿಲ್ಲಾ ವ್ಯಾಪ್ತಿಯ ಪ್ರಮುಖ ದಿನ ಪತ್ರಿಕೆಯಲ್ಲಿ ಪ್ರಕಟಣೆ ನೀಡುವ ದಿನಾಂಕ | 20-ಜುಲೈ-2021 |
| 02 | ಆಡಳಿತ ಮಂಡಳಿ / ಕಾಲೇಜಿನ ಪ್ರಾಂಶುಪಾಲರು ತಮ್ಮ ಕೋರಿಕೆಯನ್ನು ನಿಗದಿತ ಚೆಕ್‌ಲಿಸ್ಟ್‌ನಲ್ಲಿ ಪೂರಕ ದಾಖಲೆ / ಮಾಹಿತಿಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | 24-ಜುಲೈ-2021 |
| 03 | ಜಿಲ್ಲಾ ಉಪ ನಿರ್ದೇಶಕರು ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಜಿಗಳ ಸಂಖ್ಯೆಯನ್ನು ಅನುಸರಿಸಿ ಒಂದು ವೇಳಾಪಟ್ಟಿಯನ್ನು ತಯಾರಿಸಿ, ಸ್ಥಳ ಪರಿಶೀಲನೆ ನಡೆಸಿ, ಪ್ರಸ್ತಾವನೆಗಳನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 04-ಆಗಸ್ಟ್-2021 |
| 04 | ಜಿಲ್ಲಾ ಉಪ ನಿರ್ದೇಶಕರುಗಳಿಂದ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ನಿರ್ದೇಶನಾಲಯವು ಪರಿಶೀಲಿಸಿ ಇತ್ಯರ್ಥ ಪಡಿಸುವ ಅಂತಿಮ ದಿನಾಂಕ | 28-ಆಗಸ್ಟ್-2021 |

**ವಿಶೇಷ ಸೂಚನೆ:** ಕ್ರಮ ಸಂಖ್ಯೆ 02ರಲ್ಲಿ ನಿಗಧಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

## ಸೂಚ್ಯಂಕ(INDEX)

**2021–22ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ / ಹೆಚ್ಚುವರಿ ಭಾಷೆ, ಸಂಯೋಜನೆ, ವಿಭಾಗಗಳನ್ನು ಪ್ರಾರಂಭಿಸಲು ಇಲಾಖೆಯ ಅನುಮತಿ / ಮಂಜೂರಾತಿ ಕೋರಿ ಸಲ್ಲಿಸಿರುವ ದಾಖಲೆಗಳ ವಿವರ**

| ಕ್ರಮ ಸಂಖ್ಯೆ | ಪ್ರಸ್ತಾವನೆಯೊಂದಿಗೆ ಸಲ್ಲಿಸಿದ ದಾಖಲೆಗಳ ವಿವರ | ಪುಟ ಸಂಖ್ಯೆ | ಷರಾ |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ಆಡಳಿತ ಮಂಡಳಿಯ ಅಧ್ಯಕ್ಷರ / ಕಾರ್ಯದರ್ಶಿಯವರ ಸಹಿ ಮತ್ತು ಮೊಹರು

ಜಿಲ್ಲಾ ಉಪ ನಿರ್ದೇಶಕರ ಸಹಿ ಮತ್ತು ಮೊಹರು